# ದಯದಾಕ್ಷಿಣ್ಯದಿಂದ ಹಿಂಜರಿಯುವುದು ಹೇಡಿತನ !



• ವಿದ್ಯಾವಾಚಸ್ಪತಿ
ಬನ್ನಂಜೆ ಗೋವಿಂದಾಚಾರ್ಯ
ಈಶಾವಾಸ್ಯಂ, ಅಂಬಲಪಾಡಿ
ಉಡುಪಿ – 576 103

ಭಗವದ್ಗೀತೆಗೆ ಮೂಲವೇ ಅರ್ಜುನನ ದಯ ದಾಕ್ಷಿಣ್ಯದ ನಿಲುವು. ಕ್ಷತ್ರಿಯನಾದ ಅರ್ಜುನನ ಧರ್ಮವೇ ಅನ್ಯಾಯದ ವಿರುದ್ಧ, ಅನ್ಯಾಯವನ್ನು ಬೆಂಬಲಿಸಿದವರ ವಿರುದ್ಧ ಹೋರಾಡುವುದು. ದೇಶದ ಹಿತಕ್ಕಾಗಿ ಅಲ್ಲ, ಸ್ವಾರ್ಥಕ್ಕಾಗಿ ಸಮ್ರಾಟ ಆಗಬಯಸಿದ್ದೇ ದುರ್ಯೋಧನ ಮಾಡಿದ ಅನ್ಯಾಯ. ಶಾಸ್ತ್ರವೇತ್ತರಾದ ಭೀಷ್ಮದ್ರೋಣಾದಿ ಗಳಿಗೆ ಈ ನ್ಯಾಯಾನ್ಯಾಯದ ವಿಚಾರವು ತಿಳಿಯ ದ್ದೇನಲ್ಲ, ಅನ್ಯಾಯವನ್ನು ಪ್ರತಿಭಟಿಸದಿರುವುದೂ ಅನ್ಯಾಯವೇ ಎಂಬುದೂ ತಿಳಿಯದ್ದೇನಲ್ಲ. ಆದರೆ ಅವರ ಬಾಯಿಯನ್ನು ಮುಚ್ಚಿಸಿದ್ದು ತಾವು ದುರ್ಯೋಧನನ ಅನ್ನ ಉಂಡವರು, ಹಾಗಿರು ವಾಗ ಅವನನ್ನು ಎದುರು ಹಾಕಿಕೊಳ್ಳುವುದು ಹೇಗೆ ಎಂಬ ದಯದಾಕ್ಷಿಣ್ಯ. ಭೀಷ್ಮದ್ರೋಣಾದಿಗಳು ತನ್ನ ನಿಲುವಿನ ಬಗ್ಗೆ ಚಕಾರವನ್ನೂ ಎತ್ತದಾಗ ದುರ್ಯೋಧನನಿಗೆ ಖಾತ್ರಿಯಾಗಿತ್ತು– ಅವರೂ ತನ್ನ ನಿಲುವನ್ನೇ ಬೆಂಬಲಿಸುತ್ತಿದ್ದಾರೆಂದು. ಹೀಗೆ ಅನ್ಯಾಯ ಮಾಡಿದ ದುರ್ಯೋಧನನನ್ನು ಬೆಂಬಲಿಸಿದ್ದೇ ಭೀಷ್ಮದ್ರೋಣಾದಿಗಳು ಮಾಡಿದ ಅನ್ಯಾಯ. ಭೀಷ್ಮರಾದರೋ ಪಾಂಡವರ ಕುಲದ ಹಿರಿಯರು – ಎಲ್ಲರ ಅಜ್ಜ; ಅರ್ಜುನಾದಿ ಎಲ್ಲ ರನ್ನೂ ತಮ್ಮ ತೊಡೆಯ ಮೇಲೆ ಕುಳ್ಳಿರಿಸಿ ಮುದ್ದಿ ನಿಂದ ಲಾಲಿಸಿ ಪಾಲಿಸಿದವರು. ಇನ್ನು ದ್ರೋಣರು ಪಾಂಡವರಿಗೆಲ್ಲ ಧನುರ್ವಿದ್ಯೆಯನ್ನು ಹೇಳಿಕೊಟ್ಟ ಗುರುಗಳು. ಗುರುಗಳಾಗಲೀ, ಹಿರಿಯರಾಗಲೀ ಅನ್ಯಾಯ ಮಾಡಿದಾಗ ಶಿಕ್ಷಿಸ ಬೇಕಾದ್ದು ಧರ್ಮ – ಅಪಾಯಕಾರಿ ಕ್ಯಾನ್ಸರ್‌ಗಡ್ಡೆಯನ್ನು ದಯದಾಕ್ಷಿಣ್ಯ ಇಲ್ಲದೆ ಶಸ್ತ್ರಕ್ರಿಯೆ ಮಾಡಿ ನಿವಾರಿಸಿದಂತೆ.

ಅನ್ಯಾಯದ ಬೆಂಬಲಿಗರಾಗಿದ್ದವರು ಕೌರವರ ಪಕ್ಷದಲ್ಲಿದ್ದವರು. ಅವರೊಡನೆ ಯುದ್ಧ ಮಾಡುವ ಮೊದಲೊಮ್ಮೆ ಅವರನ್ನೆಲ್ಲ ಕಣ್ಣರಳಿಸಿ ನೋಡಿ ಬಿಡುವ ಹಂಬಲದಿಂದ ಸಾರಥಿಯಾದ ಶ್ರೀಕೃಷ್ಣ ನೊಡನೆ ಅರ್ಜುನನೆನ್ನುತ್ತಾನೆ–

**'ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ** – ಎರಡೂ ಸೇನೆಗಳ ನಡುವೆ ನನ್ನ ರಥವನ್ನು ನಿಲ್ಲಿಸು' ಎಂದು. ಸರಿ, ಕೃಷ್ಣ ಹಾಗೆಯೇ ಮಾಡಿದ. ಅರ್ಜುನನೂ ಎಲ್ಲರನ್ನೂ ನೋಡಿದ. ಆದರೆ ಆ ನೋಟ ದಯ ದಾಕ್ಷಿಣ್ಯದ ಮೋಡಿಯನ್ನೇ ಮಾಡಿತೆನ್ನಬೇಕು.

ಎದುರು ಪಡೆಯ ಭೀಷ್ಮದ್ರೋಣಾದಿ ಅತಿರಥ, ಮಹಾರಥರನ್ನು ಕಂಡಾಗ ಕ್ಷತ್ರಿಯನಾದ ಅರ್ಜುನನ ರೋಷ ಉಕ್ಕಿ ಅಂಥವರ ರುಂಡ ಗಳನ್ನೆಲ್ಲ ಚೆಂಡಾಡುವ ಕೆಚ್ಚು ಕೆರಳಬೇಕಿತ್ತಲ್ಲವೇ ? ಆದರೆ ಹಾಗಾಗಲೇ ಇಲ್ಲ. ಅವರನ್ನೆಲ್ಲ ನೋಡ ನೋಡುತ್ತಿದ್ದಂತೆ ಅದೇನೋ ಮೋಹಪೀಡಿತ ಕಾರುಣ್ಯ ಅರ್ಜುನನನ್ನು ಕವಿಯಿತು. ಅವನಿಗೆ ಎದುರುಕಡೆಯವರು ವೈರಿಗಳಾಗಿ ಕಾಣಿಸದೆ, ತನ್ನವರು, ತನ್ನ ಗುರುಹಿರಿಯರು, ಬಂಧು ಮಿತ್ರರು ಆಗಿ ಕಾಣಿಸಿದರು. ಆಗಲೇ ಅರ್ಜುನನ ಹೃದಯ ಕರಗಿ, ಬಾಯಿಯಿಂದ 'ಕೃಷ್ಣ, ನನ್ನ ಗುರುಹಿರಿಯರಾದಿಯಾಗಿ ನನ್ನ ಪೈಕಿಯವರೆಲ್ಲ ಸಾಯುವ ಈ ಯುದ್ಧ ಬೇಡ' ಎಂಬ ಮಾತು ಹೊರಟಿತು. ಯುದ್ಧದಲ್ಲಿ ಸಾಯುವವರು ಸಾವಿರಾರು ಮಂದಿಯಾದರೂ, ಅರ್ಜುನನ ಅಳಲೆಲ್ಲ ತನ್ನವರು ಸಾಯುತ್ತಾರೆ ಎಂದು ತನ್ನವರಿಗೆ ಮಾತ್ರ ಸೀಮಿತ ಆಗಿತ್ತು. ಇದೇ ಸ್ವಜನಪಕ್ಷ ಪಾತದ ದಯದಾಕ್ಷಿಣ್ಯ. ಈ ದಯದಾಕ್ಷಿಣ್ಯಕ್ಕೆ ಬಲಿಯಾದಾಗ ಅನ್ಯಾಯವೇ ನ್ಯಾಯವಾಗಿ ಕಾಣುತ್ತದೆ, ಅಧರ್ಮವೇ ಧರ್ಮವಾಗಿ ತೋರು ತ್ತದೆ. ಅರ್ಜುನನಿಗೀಗ ಆದದ್ದೂ ಅದೇನೇ. ಅವನ ಆ ಹಿಂಜರಿಕೆ ಹೇಡಿತನ ಎಂಬುದನ್ನೇ ಬಿಂಬಿಸುತ್ತ ಕೃಷ್ಣ ಎನ್ನುತ್ತಾನೆ–

**ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ ತ್ವಯ್ಯುಪಪದ್ಯತೇ ।**
**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥**

'ಅರಿಗಳ ಎದೆಗೆಡಿಸುವ ವೀರನಾದ ಪಾರ್ಥನೇ, ಹೇಡಿಯಾಗಬೇಡ – ನಿನಗಿದು ತರವಲ್ಲ. ನಿನ್ನ ನ್ನೀಗ ಕಾಡುತ್ತಿರುವ ಕ್ಷುದ್ರ ಹೃದಯ ದೌರ್ಬಲ್ಯ ವನ್ನು ಕಿತ್ತೆಸೆದು ಹೋರಾಟಕ್ಕೆ ಅಣಿಯಾಗು.'

ಅನ್ಯಾಯದ ವಿರುದ್ಧದ ಹೋರಾಟದಲ್ಲಿ ದಯದಾಕ್ಷಿಣ್ಯ ಸಲ್ಲದು ಎನ್ನುವ ಮೂಲಕ ಕೃಷ್ಣ ಧರ್ಮಾಧರ್ಮದ ಹೊಸ ವ್ಯಾಖ್ಯೆಯನ್ನೇ ಕೊಡುತ್ತಾನೆ. ಅವನೆನ್ನುವಂತೆ ಧರ್ಮ ಎಂಬುದು ಕ್ರಿಯೆಯಲ್ಲ– ಒಂದು ಭಾವ. ಯಾವ ಕ್ರಿಯೆಯ ಹಿಂದೆ ಸದ್‌ಭಾವ ಇರುತ್ತದೋ ಅದು ಧರ್ಮ. ಯಾವ ಕ್ರಿಯೆಯ ಹಿಂದೆ ದುರ್ಭಾವ ಇರು ತ್ತದೋ, ಅದು ಅಧರ್ಮ. ಹೀಗೆ ಕ್ರಿಯೆಯ ಹಿಂದಿರುವ ಉದ್ದೇಶದಿಂದ ಧರ್ಮಾಧರ್ಮದ ನಿಷ್ಕರ್ಷೆ ಆಗುವುದು. ಒಂದೇ ಕ್ರಿಯೆ ಈ ರೀತಿ ಬೇರೆ ಬೇರೆ ಸಂದರ್ಭಗಳಲ್ಲಿ ಧರ್ಮವೂ ಆಗಬಹುದು, ಅಧರ್ಮವೂ ಆಗಬಹುದು.

ಒಬ್ಬನಿಗೆ ಪೆಟ್ಟು ಹೊಡೆಯುವುದು, ಚೂರಿ ಹಾಕುವುದು ಹಿಂಸೆ. ಆದರೆ ಮಗು ತಪ್ಪು ಮಾಡಿದಾಗ ತಾಯಿ ಹೊಡೆಯುತ್ತಾಳೆ, ರಸ್ತೆಯಲ್ಲಿ ಯಾರೋ ಆಗದವರು ಸೊಂಟ ಮುರಿಯಲೆಂದು ಹೊಡೆಯುತ್ತಾರೆ. ತಾಯಿ ಹೊಡೆದದ್ದು ತಪ್ಪಲ್ಲ, ಅದು ಧರ್ಮ. ಕಾರಣ ಆಕೆ ಹೊಡೆದದ್ದು ಮಗು ವಿಗೆ ಒಳಿತಾಗಬೇಕೆಂಬ ಪ್ರೀತಿಯಿಂದ, ಸದ್ಭಾವ ದಿಂದ. ಆದರೆ ಸೊಂಟ ಮುರಿದದ್ದು ದ್ವೇಷದಿಂದ, ದುರ್ಭಾವದಿಂದ. ಆದ್ದರಿಂದಲೇ ಅದು ಅಧರ್ಮ. ಆ ದೃಷ್ಟಿಯಲ್ಲಿ ಹೊಟ್ಟೆಯ ಶಸ್ತ್ರಚಿಕಿತ್ಸೆ ಮಾಡಿ ಬದುಕಿಸಲೆಂದು ವೈದ್ಯರು ಹೊಟ್ಟೆಗೆ ಚೂರಿ ಹಾಕಿದರೆ ಅದು ಧರ್ಮ. ಆದರೆ ದುಷ್ಕರ್ಮಿಗಳು ಸಾಯಿಸಲೆಂದು ಹೊಟ್ಟೆಗೆ ಚೂರಿ ಹಾಕಿದರೆ ಅದು ಅಧರ್ಮ. ಹುಲಿಯೊಂದು ಕಾಡಿನ ಸಮೀಪದ ಹಳ್ಳಿಯ ಹಸುಗಳನ್ನು ದಿನವೂ ಹಿಡಿದು ತಿನ್ನುತ್ತಿರುತ್ತದೆಂದೆಣಿಸಿ. ಆಗ ಬೇಟೆಗಾರ ಆ ಹುಲಿಯನ್ನು ಕೊಲ್ಲುತ್ತಾನೆ ಎಂದೆಣಿಸಿ. ಆಗ ಹುಲಿಯೂ, ಬೇಟೆಗಾರನೂ ಮಾಡಿದ್ದು ಕೊಲ್ಲುವ ಕ್ರಿಯೆಯನ್ನೇ. ಆದರೆ ಹುಲಿಯದು ಹಿಂಸೆ – ಅಧರ್ಮ; ಆದರೆ ಬೇಟೆಗಾರನದು ಅಹಿಂಸೆ – ಧರ್ಮ. ಯಾಕೆ ಗೊತ್ತೇ? ಒಂದು ಹುಲಿ ಬದುಕಿದ್ದರೆ ನೂರಾರು ಹಸುಗಳು ಸಾಯುತ್ತಿದ್ದವು. ಈಗ ಒಂದು ಹುಲಿ ಸಾಯುವುದರಿಂದ ನೂರಾರು ಹಸುಗಳು ಹಾಯಾಗಿ ಬದುಕುವಂತಾಗಿದೆ. ಒಂದು ಹಿಂಸೆಯಿಂದ ನೂರು ಅಹಿಂಸೆಯನ್ನು ಸಾಧಿಸಬಹುದಾದರೆ ಆ ಹಿಂಸೆ ಅಹಿಂಸೆಯೇ, ಧರ್ಮವೇ ಆಗುತ್ತದೆ. ಕಾರಣ ಹಿಂಸೆಯ ಉದ್ದೇಶ ಹುಲಿಯ ಕೊಲೆಯಲ್ಲ, ಹಸುಗಳ ಬದುಕು. ಅರ್ಜುನನ ಲೆಕ್ಕಾಚಾರ ತಪ್ಪಿದ್ದು ಇಲ್ಲಿಯೇ.

ಅನ್ಯಾಯ ಮಾಡಿದ ಒಬ್ಬನನ್ನು ಹಾಗೆಯೇ ಬಿಟ್ಟರೆ ನಾಳೆ ಅವನು ಸಾವಿರ ಜನರನ್ನು ಸಾಯಿಸಿಯಾನು. ಆದ್ದರಿಂದ ಆ ಸಾವಿರ ಜನರ ಬದುಕಿಗಾಗಿ ಅನ್ಯಾಯ ಮಾಡಿದ ಒಬ್ಬನನ್ನು ಸಾಯಿಸುವುದು ಧರ್ಮ ಆಗುತ್ತದೆ. ಅದನ್ನು ಪಾಲಿಸದೇ ಹೋದರೆ ಕರ್ತವ್ಯಲೋಪ ಮಾಡಿ, ಧರ್ಮಕ್ಕೆ ಚ್ಯುತಿ ತಂದಂತಾಗುತ್ತದೆ. ಆದ್ದರಿಂದ ಅನ್ಯಾಯದ ಪಕ್ಷದಲ್ಲಿ ಗುರುಹಿರಿಯರಾದಿಯಾಗಿ ಯಾರೇ ಇರಲಿ, ಹೋರಾಟ ಅವರ ವಿರುದ್ಧ ಅಲ್ಲ – ಅವರು represent ಮಾಡುವ ಅನ್ಯಾಯದ ವಿರುದ್ಧ ಎಂದು ತಿಳಿದು ಅದನ್ನು ಪ್ರತಿಭಟಿಸಿ ನಿರ್ದಾಕ್ಷಿಣ್ಯವಾಗಿ ಹೋರಾಡುವುದೇ ಧರ್ಮ. ಅದರ ಬದಲು ಹಿಂಜರಿಯುವುದು ಹೇಡಿತನ. ಅದರಿಂದ ಅನ್ಯಾಯವನ್ನು ಪರೋಕ್ಷವಾಗಿ ಪ್ರೋತ್ಸಾಹಿಸಿದ ದೋಷ ತಟ್ಟುತ್ತದೆ. ಅದು ಸರ್ವಥಾ ಸಲ್ಲದು ಎಂಬುದೇ ಶ್ರೀಕೃಷ್ಣನ ಅಮೃತ ಸಂದೇಶ.